ಕರ್ನಾಟಕ ಸರ್ಕಾರ

. Comp 9 /2003-04

ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, BWSSB ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ 29.09.2004.

# ಗಣಕೀಕರಣ
# ಸುತ್ತೋಲೆ - 10

ವಿಷಯ:- ಸರ್ವೀಸ್ ಪ್ರೊವೈಡರ್ ರವರಿಗೆ ಸೇವಾಶುಲ್ಕವನ್ನು ಪಾವತಿಸುವ ಪೂರ್ವದಲ್ಲಿ ಕಂಪ್ಯೂಟರ್‌ನಿಂದ ಜನರೇಟ್ ಮಾಡಿದ ಇನ್‌ವಾಯ್ಸ್‌ಗೆ ಜಿಲ್ಲಾ ನೋಂದಣಾಧಿಕಾರಿಗಳು ಮೇಲು ರುಜು ಹಾಕುವ ಕುರಿತು.

**

ಸರ್ವೀಸ್ ಪ್ರೊವೈಡರ್ ರವರಿಗೆ ಅವರು ಪೂರೈಸಿದ ಕೆಲಸಕ್ಕೆ ಸೇವಾಶುಲ್ಕವನ್ನು ಪಾವತಿಸಲು ಕಂಪ್ಯೂಟರ್‌ನಿಂದ ಇನ್‌ವಾಯ್ಸ್‌ನ್ನು ಜನರೇಟ್ ಮಾಡತಕ್ಕದ್ದು. ಜನರೇಟ್ ಮಾಡಿದ ನಂತರ ಅದರಲ್ಲಿ ಮುದ್ರಿಸಿದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸತಕ್ಕದ್ದು. ಎಷ್ಟು ಡಾಕ್ಯುಮೆಂಟ್ ಶೀಟುಗಳನ್ನು ಸ್ಕ್ಯಾನಿಂಗ್ ಮಾಡಲಾಗಿದೆ, ಸ್ಕ್ಯಾನಿಂಗ್ ಆದ ಪುಟಗಳಿಗೆ ಒಡಂಬಡಿಕೆಯಂತೆ ಪಾವತಿಸಬೇಕಾದ ಹಣ ಎಷ್ಟು ಎಂಬುದು, ಒಂದು ವೇಳೆ ಇನ್‌ವಾಯ್ಸ್‌ನಲ್ಲಿ ಮುದ್ರಿತ ಅಂಕಿಅಂಶಗಳು ತಪ್ಪಾಗಿ ಬಂದಿದ್ದರೆ ನಿಖರವಾದ ಅಂಕಿ ಅಂಶಗಳನ್ನು ಸರಿಪಡಿಸಿ ಉಪನೋಂದಣಾಧಿಕಾರಿಗಳು ಸಹಿ ಮಾಡತಕ್ಕದ್ದು. ಈ ಇನ್‌ವಾಯ್ಸ್‌ಗಳನ್ನು 4 ಪ್ರತಿಗಳಲ್ಲಿ ಪ್ರಿಂಟ್ ತೆಗೆದು ಪ್ರತಿಯೊಂದು ತಿದ್ದುಪಡಿಗೂ ಉಪನೋಂದಣಾಧಿಕಾರಿ ರುಜು ಹಾಕತಕ್ಕದ್ದು. ಈ 4 ಪ್ರತಿಗಳನ್ನು ಉಪನೋಂದಣಾಧಿಕಾರಿಯವರು ಕೂಲಂಕುಷವಾಗಿ ಪರಿಶೀಲಿಸಿ, ದೃಡೀಕರಿಸಿ ಜಿಲ್ಲಾ ನೋಂದಣಾಧಿಕಾರಿಗಳ ಮೇಲು ಸಹಿಗಾಗಿ ಕಳುಹಿಸಿಕೊಡತಕ್ಕದ್ದು.

2. ಉಪನೋಂದಣಾಧಿಕಾರಿಗಳು ಸಾರ್ವಜನಿಕರಿಂದ ವಸೂಲಾದ ಸ್ಕ್ಯಾನಿಂಗ್ ಫೀ ಮೊಬಗಲನ್ನು "0030-03-800-0-02" ಲೆಕ್ಕಶೀರ್ಷಿಕೆಗೆ ನಿತ್ಯವೂ ಜಮೆ ಆದ ವಿಷಯವನ್ನು ಸಹ ಖಜಾನೆ ಇಲಾಖೆಯವರೊಂದಿಗೆ ಸರ್ಕಾರದ ಆದೇಶ ಸಂಖ್ಯೆ ಕಂಇ 482 ಮುನೋಮು 2003 (ಭಾ-1), ಬೆಂಗಳೂರು, ದಿನಾಂಕ 11.8.2004ನೇದರಲ್ಲಿ ನಿಗಧಿಪಡಿಸಿದ ನಮೂನೆ 1ರಲ್ಲಿ ಹೊಂದಾಣಿಕೆ ಮಾಡಿಕೊಂಡು ಈ ನಮೂನೆಯೊಂದಿಗೆ ಇನ್‌ವಾಯ್ಸ್‌ಗಳನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ತಪ್ಪದೇ ಕಳುಹಿಸತಕ್ಕದ್ದು.

3. ಜಿಲ್ಲಾ ನೋಂದಣಾಧಿಕಾರಿಗಳು, ಉಪನೋಂದಣಾಧಿಕಾರಿಗಳು ನಮೂನೆ 1ರೊಂದಿಗೆ ಕಳುಹಿಸಿದ ಮಾಹಿತಿ ಹಾಗೂ ಇನ್‌ವಾಯ್ಸ್‌ಗಳನ್ನು ಪರಿಶೀಲಿಸಿ ಸಾರ್ವಜನಿಕರಿಂದ ವಸೂಲಾದ ಸ್ಕ್ಯಾನಿಂಗ್ ಫೀ ಸರ್ಕಾರಕ್ಕೆ ಜಮೆಯಾದ ಬಗ್ಗೆ ಫಾರಂ ನಂ.2ರಲ್ಲಿ ದೃಡೀಕರಿಸಿ ಈ ಕಛೇರಿಗೆ ಪ್ರತಿ ತಿಂಗಳೂ 10ನೇ

-2

ತಾರೀಖಿನೊಳಗೆ ನೇರವಾಗಿ ಒಂದು ಪ್ರತಿಯನ್ನು ಕಳುಹಿಸಿ, ಇನ್ನೊಂದು ಪ್ರತಿಯನ್ನು ತಮ್ಮ ಕಛೇರಿಯಲ್ಲೂ, ಮತ್ತೊಂದು ಪ್ರತಿಯನ್ನು ಉಪನೋಂದಣಾಧಿಕಾರಿ ಕಛೇರಿಗೂ ಹಾಗೂ ಇನ್ನೊಂದು ಪ್ರತಿಯನ್ನು ಸಂಬಂಧಪಟ್ಟ ಕಂಪನಿಗೂ ಕಳುಹಿಸಿ ಕೊಡಬೇಕು. ಈ ಆದೇಶವನ್ನು ತಪ್ಪದೇ ಪಾಲಿಸಬೇಕು.

(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ
3. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ.
4. ಗಾರ್ಡ್ ಫೈಲ್
5. ಕಛೇರಿ ಕಡತಕ್ಕೆ

ಪ್ರತಿಯನ್ನು ಮಾಹಿತಿಗಾಗಿ

1. CMS Computers Ltd., IInd Floor, Laxmi Complex, No.54, St. Marks Road, Bangalore -1.
2. ECIL Computers Ltd., No.30/1, Cunningham Road, Bangalore-52.